**CC No.694/2012**
**PW.7**

**<u>ಸಾಕ್ಷಿಗೆ ದಿನಾಂಕ 20.07.2024 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರಿಂದ

ಚಾಸಾ-1 ರವರು ನನಗೆ ದೂರದ ಸಂಬಂಧಿ. ನಾನು ಅವರ ಪಕ್ಕದ ಮನೆಯಲ್ಲಿ ವಾಸಿಸುತ್ತೇನೆ. ನಾನು ಅವರ ಮನೆಯಲ್ಲಿ ಕೆಲಸ ಮಾಡುವುದಿಲ್ಲ. ಮದುವೆಯು ಸುಮಾರು 15 ವರ್ಷಗಳ ಹಿಂದೆ ಆಗಿರುತ್ತದೆ. ಮದುವೆಯ ಮಾತುಕತೆಗೆ ನಾನು ಹೋಗಿರುತ್ತೇನೆ. ಮಾತುಕತೆಯನ್ನು ಬರವಣಿಗೆ ರೂಪದಲ್ಲಿ ಮಾಡಿರುವುದಿಲ್ಲ. ಮದುವೆಯ ಮಾತುಕತೆಯ ಸಮಯದಲ್ಲಿ ಫ್ರಾಸಾ-6/ಚಾಸಾ-6 ರವರು ಹಾಗೂ ಇನ್ನೂ ಇತರರು ಹಾಜರಿದ್ದರು. ಒಕ್ಕಲಿಗರ ಮದುವೆಯ ಸಂಪ್ರದಾಯದಲ್ಲಿ ಮದುಮಗನಿಗೆ ಬ್ರಾಸ್ಲೆಟ್, ಉಂಗುರ, ಚೈನು, ವಾಚ್, ಬಟ್ಟೆ ಖರೀದಿಸಲು ದುಡ್ಡನ್ನು ಉಡುಗೊರೆಯಾಗಿ ಕೊಡುತ್ತಾರೆ ಎಂದರೆ ಸರಿ. ಮದುಮಗಳಿಗೆ ಸಂಪ್ರದಾಯವಾಗಿ ಒಡವೆ, ಓಲೆ, ಸೀರೆ ಹಾಗೂ ಜುಮುಕಿ ಹಾಗೂ ಮಾಂಗಲ್ಯ ಚೈನನ್ನು ಉಡುಗೊರೆಯಾಗಿ ಕೊಡುತ್ತಾರೆ ಎಂದರೆ ಸರಿ. ಇವೆಲ್ಲವನ್ನೂ ಸಾಂಪ್ರದಾಯಿಕವಾಗಿ ಕೊಡುತ್ತಾರೆ ಎಂದರೆ ಸರಿ. ಮದುವೆಯು ಸಂಪ್ರದಾಯಿಕವಾಗಿ ಹಿರಿಯರು ನಿಶ್ಚಯಿಸಿದ ವಿವಾಹವಾಗಿರುತ್ತದೆ ಎಂದರೆ ಸರಿ. ಅದು ಪ್ರೇಮ ವಿವಾಹವಲ್ಲ ಎಂದರೆ ಸರಿ. ಚಾಸಾ-1 ರವರ ತಂದೆಯ ಹೆಸರು ಬೈಲಪ್ಪ, ಅವರು ಶಿಕ್ಷಕರಾಗಿರುತ್ತಾರೆ. ಮದುವೆಯ ಸಮಯದಲ್ಲಿ ಅವರು ನಿವೃತ್ತಿಯನ್ನು ಹೊಂದಿರುತ್ತಾರೆ. ಚಾಸಾ-2 ರವರಿಗೆ ಚಾಸಾ-1 ರವರು ಒಬ್ಬಳೇ ಮಗಳು. ಅವರು ಅವರ ತಮ್ಮನ ಮಗನನ್ನು ಸಾಕುತ್ತಿದ್ದರು. ಚಾಸಾ-2 ರವರಿಗೆ ಪಿಂಚಣಿಯನ್ನು ಹೊರತುಪಡಿಸಿ ಬಾಡಿಗೆಯೂ ಬರುತ್ತದೆ. ಎಷ್ಟು ಮನೆಗಳಿಂದ ಬಾಡಿಗೆ ದೊರೆತಿದೆ ಎಂದು ಗೊತ್ತಿಲ್ಲ. ಚಾಸಾ-2 ರವರು ಶ್ರೀಮಂತ ಕುಟುಂಬದವರು ಆಗಿರುವುದಿಲ್ಲ.

ಒಕ್ಕಲಿಗ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಹುಡುಗಿಯ ಮನೆಯ ಊರಿನಲ್ಲಿಯೇ ಮದುವೆಯನ್ನು ಮಾಡಿಕೊಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿತರು ನಗರದಲ್ಲಿಯೇ ಮದುವೆ ಮಾಡಿಕೊಡಿ ಎಂದು ಕೇಳಿಕೊಂಡಿದ್ದರ ಮೇರೆಗೆ ನಾವು ಮದುವೆ ಮಾಡಿಕೊಟ್ಟಿರುತ್ತೇವೆ. ಸಾಮಾನ್ಯವಾಗಿ ಒಕ್ಕಲಿಗ ಸಂಪ್ರದಾಯದಲ್ಲಿ ಮದುವೆಯ ಖರ್ಚನ್ನು ಹುಡುಗಿಯ ಮನೆಯವರೇ ಭರಿಸಿರುತ್ತಾರೆ ಎಂದರೆ ಸರಿ. ಮದುವೆಗೆ ಎಷ್ಟು ಖರ್ಚಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಾಗೂ ಖರ್ಚನ್ನು ಯಾರು ಮಾಡಿರುತ್ತಾರೆಂದು ಸಹ ಗೊತ್ತಿಲ್ಲ. ಮದುವರೆಯ ನಂತರ ಚಾಸಾ-1 ಮತ್ತು 1 ನೆ ಆರೋಪಿಯ ಜೊತೆ ದೊಡ್ಡಬಳ್ಳಾಪುರದಲ್ಲಿ ಒಟ್ಟು ಕುಟುಂಬದವರ ಜೊತೆ ಸುಮಾರು 1 ವರ್ಷಗಳ ಕಾಲ ಇದ್ದರು. 1 ನೇ ಆರೋಪಿಯ ಕುಟುಂಬವರು ಎಮ್ಮೆಗಳನ್ನು ಕಟ್ಟಿಕೊಂಡು ಹಾಲಿನ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಎಷ್ಟು ಬಾಡಿಗೆ ಮನೆಗಳನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅವರು ಬಾಡಿಗೆ ಮನೆಯಲ್ಲಿದ್ದಾಗ ನೋಡಿರುವುದಿಲ್ಲ. ಆರೋಪಿತರ ಮನೆಯಲ್ಲಿ ಜಗಳವಾದ ಬಗ್ಗೆ ಚಾಸಾ-1 ರವರೇ ನನಗೆ ತಿಳಿಸಿರುತ್ತಾರೆ. ಮದುವೆಯಾದ ಸುಮಾರು 6-7 ತಿಂಗಳುಗಳ ನಂತರ ಸದರಿ ವಿಷಯವನ್ನು ನನಗೆ ತಿಳಿಸಿರುತ್ತಾರೆ. ಆ ವಿಷಯವು ಚಾಸಾ-2 ರವರಿಗೂ ಸಹ ತಿಳಿದಿರುತ್ತದೆ. ವಿಷಯ ತಿಳಿದ ನಂತರ ಚಾಸಾ-2 ರವರು ಅಕ್ಕಪಕ್ಕದ ಮನೆಯವರ ಬಳಿ ವಿಚಾರಿಸಿದ ವಿಷಯ ನನಗೆ ಗೊತ್ತಿಲ್ಲ. 1 ನೇ ಆರೋಪಿಯನ್ನು ಮನೆಯ ಅಳಿಯನನ್ನಾಗಿ ಮಾಡಿಕೊಳ್ಳುವ ಆಸೆಯನ್ನು ಹೊಂದಿದ್ದರು ಎಂದರೆ ಸರಿಯಲ್ಲ.

1 ನೇ ಆರೋಪಿ ಮತ್ತು ಚಾಸಾ-1 ರವರು ಸುಮಾರು 1 ವರ್ಷಗಳ ಕಾಲ ಚೆನ್ನಾಗಿದ್ದರು. ಎಮ್ಮೆಯ ಕೊಟ್ಟಿಗೆಯ ವಾಸನೆಯನ್ನು ತಾಳಲಾಗದೇ ಬೇರೆ ಬಾಡಿಗೆ ಮನೆಯನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಯಾವ ದಿನಗಳಂದು ಚಾಸಾ-1 ರವರು ಆರೋಪಿತರು ಅವರಿಗೆ ಕಿರುಕುಳ ನೀಡಿದ ವಿಷಯವನ್ನು ನನಗೆ ತಿಳಿಸಿರುತ್ತಾರೆಂದು ನನಗೆ ನೆನಪಿರುವುದಿಲ್ಲ.

ವರದಕ್ಷಿಣೆ ಮತ್ತು ಆಸ್ತಿಯನ್ನು ಬರೆಸಿಕೊಂಡು ಬಾ ಎಂದು ಯಾವ ದಿನಾಂಕದಂದು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ಚಾಸಾ-1 ರವರೇ ನನಗೆ ತಿಳಿಸಿರುತ್ತಾರೆ. ಮದುವೆಯಾದ 6 ತಿಂಗಳ ನಂತರ ಕಿರುಕುಳ ನೀಡುತ್ತಿರುವ ಬಗ್ಗೆ ಹಾಗೂ ವರದಕ್ಷಿಣೆಯನ್ನು ಕೇಳುತ್ತಿರುವ ಬಗ್ಗೆ ಪೋಲೀಸ್ ಠಾಣೆಯಲ್ಲಿ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಮದುವೆಯಾದ 1 ½ ವರ್ಷಕ್ಕೆ ಚಾಸಾ-1 ರವರನ್ನು ಅವರ ತಾಯಿಗೆ ಆರೋಗ್ಯ ಸರಿಯಿಲ್ಲವೆಂದು ತವರು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ತವರು ಮನೆಯಿಂದ ಚಾಸಾ-1 ರವರು ಹಿಂದಿರುಗಿ ಗಂಡನ ಮನೆಗೆ ಬಂದಿರುವುದಿಲ್ಲ. 1 ನೇ ಆರೋಪಿಯು ಚಾಸಾ-1 ರವರಿಗೆ ವಕೀಲರ ಮೂಲಕ ನೋಟೀಸ್ ನೀಡಿ ಜೊತೆಗೆ ಸಂಸಾರ ಮಾಡಲು ವಾಪಸ್ಸು ಬಾ ಎಂದು ನೋಟೀಸ್ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ಅವರ ಮಗಳನ್ನು ನೋಡಲು ತುಂಬಾ ಬಾರಿ ಚಾಸಾ-1 ರವರಿಗೆ ಮನೆಗೆ ಭೇಟಿ ನೀಡಿರುತ್ತಾರೆ. 1 ನೇ ಆರೋಪಿಗೆ ಮಗುವನ್ನು ತೋರಿಸದೇ ಇದ್ದ ಕಾರಣ ಪೋಲೀಸರು ಸಹ ಬಂದಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಕಿರುಕುಳ ನೀಡುತ್ತಿರುವ ವಿಷಯ ಹಾಗೂ ವರದಕ್ಷಿಣೆ ಕೇಳುತ್ತಿರುವ ವಿಷಯದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ.

1 ನೇ ಆರೋಪಿಯ ವೈಯಕ್ತಿಕ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮದುವೆಯ ಸಮಯದಲ್ಲಿ 1 ನೇ ಆರೋಪಿಯು ಎಂ.ಬಿ. ಮಾಡಿದ್ದ ವಿಷಯ ಹಾಗೂ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ವಿಚಾರ ಗೊತ್ತಿತ್ತು ಎಂದು ನುಡಿಯುತ್ತಾರೆ. ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಓದಿ ಹೇಳಿದ ಮೇರೆಗೆ ನಾನು ಅವುಗಳು ಗೊತ್ತು ಎಂದು ನುಡಿದಿರುತ್ತೇನೆ. ಚಾಸಾ-1 ಮತ್ತು 1 ನೇ ಆರೋಪಿಯ ಮಧ್ಯೆ ವಿಚ್ಛೇದನವಾಗಿರುವ ಬಗ್ಗೆ ಇತ್ತೀಚೆಗೆ ನನಗೆ ತಿಳಿದುಬಂದಿರುತ್ತದೆ. 1 ನೇ ಆರೋಪಿಯು ಮನೆಯ ಅಳಿಯನಾಗಿ ಬಾರದಿದ್ದ ಕಾರಣ ಚಾಸಾ-1 ರವರು ಪೋಲೀಸ್ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು ನೀಡಿದ ನಂತರ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಚಾಸಾ-1 ಮತ್ತು ಅವರ ತಂದೆ ನಮಗೆ ಹಾಗೂ 1 ನೇ ಆರೋಪಿಯ ನಡುವೆ ಯಾವುದೇ ರೀತಿಯ ಜಗಳ ಇರುವುದಿಲ್ಲ, ಅವರು ನನಗೆ ಯಾವುದೇ ರೀತಿಯ ಕಿರುಕುಳ ನೀಡಿಲ್ಲ, ಅವರು ನಮ್ಮ ಮನೆಯ ಅಳಿಯನಾಗಿ ಬಂದರೆ ನಾವು ಎಲ್ಲಾ ಪ್ರಕರಣಗಳನ್ನು ವಜಾ ಮಾಡಿಕೊಳ್ಳುತ್ತೇವೆ ಎಂದು ವಿಚ್ಛೇದನ ಪ್ರಕರಣದಲ್ಲಿ ನುಡಿದಿರುತ್ತಾರೆ ಎಂದರೆ ಗೊತ್ತಿಲ್ಲ.

<u>ಮರು ವಿಚಾರಣೆಃ</u> ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**